ಕಾರ್ಯಕ್ರಮವೊಂದಕ್ಕೆ ಗೋಕರ್ಣಕ್ಕೆ ಹೋಗುವಾಗ ಅದೇ ಕುಮಟಾ ನಿಲ್ದಾಣದಲ್ಲಿ ಅತ್ಯಗತ್ಯವಾದ ಆಫೀಸಿನ ಮೀಟಿಂಗೊಂದನ್ನು ರಜೆಯಲ್ಲಿದ್ದ ನಾನು ಫೋನ್ ಮೂಲಕ ಅಟೆಂಡ್ ಮಾಡಿದ್ದೆ. ಆ ಸಮಯದಲ್ಲಿ ಗೋಕರ್ಣಕ್ಕೆ ಹೊರಡುತ್ತಿರುವ ಬಸ್ಸನ್ನು ಹತ್ತಲಾಗದೇ ಬಿಟ್ಟು ಮುಂದಿನ ಬಸ್ಸಿಗಾಗಿ ಒಂದು ಗಂಟೆ ಕಾಯಬೇಕಾಯ್ತು ಹಾಗೂ ಕಾರ್ಯಕ್ರಮವನ್ನು ತಲುಪುವಷ್ಟರಲ್ಲಿ ತಡವಾಗಿ ಹೋಗಿತ್ತು. ಆ ಸಿಟ್ಟಿನ್ನೂ ಮಾಸಿಲ್ಲ ಎಂಬುದು ಆಕೆಯ ಮಾತಲ್ಲೇ ಗೊತ್ತಾಗುತ್ತಿತ್ತು.

'ನಮ್ಮ ಕಷ್ಟ ನಮಗೇ ಗೊತ್ತು' ಎನ್ನುತ್ತ ನಾನು ಸಮಜಾಯಿಷಿ ನೀಡುತ್ತಿರುವ ನಡುವೆ, ಆ ವ್ಯಕ್ತಿ ನಮ್ಮ ಬೆಂಚಿನ ಹತ್ತಿರವೇ ಬಂದು ನಿಂತು ಮಾತಾಡತೊಡಗಿದ. ನಡುವೆ ಒಮ್ಮೆಲೇ, 'ಸರ್... ನಾನು ಬೇಕೆಂದೇ ಮಾಡಿಲ್ಲ ಸರ್. ಏನೋ ಕಣ್ತಪ್ಪಿನಿಂದ ಆಗಿಹೋಗಿದೆ. ವೆರಿ ವೆರಿ ಸಾರಿ. ಇನ್ನೊಮ್ಮೆ ಈ ತರ ಆಗೊಲ್ಲ. ನನ್ನ ಮಗನ ಮೇಲೆ ಆಣೆ. ನಾನು ಗೊತ್ತಿದ್ದೇ ಮಾಡಿದ್ದಲ್ಲ... ಇಂಥಾ ಅಕ್ಷನ್ ತಗೋಬೇಡಿ ಸರ್...' ಎನ್ನುತ್ತ ಆರ್ತನಾಗಿ ಅಂಗಲಾಚತೊಡಗಿದ. ಗದ್ದಕ್ಕಿದ್ದ ಮಾಸ್ಕ್ ಕಿತ್ತು ತೆಗೆದು ಅದರಲ್ಲೇ ಮುಖದ ಬೆವರು ಒರೆಸಿಕೊಂಡು ಮುದ್ದೆ ಕಟ್ಟಿ ಪ್ಯಾಂಟ್ ಕಿಸೆಯಲ್ಲಿ ತೂರಿಸಿದ. ಆತನ ಅಲವತ್ತುಕೊಳ್ಳುವಿಕೆ ನೋಡಿ ನನ್ನ ಶ್ರೀಮತಿಗೂ ಏನೋ ಒಂಥರಾ ಸಂಕಟವಾಗಿರಬೇಕು. ನಮ್ಮ ನಡುವಿನ ವಾಗ್ಯುದ್ಧ ಅಲ್ಲೇ ಮೊಟಕುಗೊಳಿಸಿದಳು.



ಕಲೆ: ಡಾ. ಸಿ. ರವೀಂದ್ರನಾಥ

★★★

ಯುವಲ್ ಹರಾರಿ ತನ್ನ '21 ಲೆಸನ್ಸ್ ಫಾರ್ ದ 21 ಸೆಂಚುರಿ' ಎನ್ನುವ ಪುಸ್ತಕದಲ್ಲಿ, ಮುಂಬರುವ ದಿನಗಳಲ್ಲಿ ಮನುಷ್ಯ ಯಂತ್ರಗಳಿಗೆ ಸಂಪೂರ್ಣ ವಶವಾಗಿ ಹೋಗುತ್ತಾನೆ. ಕೃತಕ ಬುದ್ಧಿಮತ್ತೆ (AI) ಪ್ರೇರಿತ 'ಸೂಪರ್ ಹ್ಯೂಮನ್' ಎನ್ನುವ ವರ್ಗವೊಂದು ಈ ಭೂಮಿಯ ಮೇಲೆ ಸೃಷ್ಟಿಯಾಗುತ್ತದೆ ಹಾಗೂ ಅದು ಈಗಿನ 'ಹ್ಯೂಮನ್' ಅನ್ನುವ ವರ್ಗವನ್ನು ನಾಶ ಮಾಡುತ್ತದೆ ಅನ್ನುತ್ತಾನೆ. (ಮೊಬೈಲು, ಕಂಪ್ಯೂಟರಿನಂತಹ ವಿವಿಧ ಗ್ಯಾಜೆಟ್ಟುಗಳನ್ನೂ ಒಳಗೊಂಡು, ಮೆದುಳಿನೊಳಕ್ಕೆ ಹೋಗಿ ಕೂರಬಲ್ಲ ಸಾಸಿವೆ ಕಾಳಿನಿಂದ ಹಿಡಿದು 'ಏಐ' ಆಧಾರಿತ ಅಸಂಖ್ಯ ಉಪಕರಣಗಳೆಲ್ಲವೂ ಯಂತ್ರಗಳೇ ಎಂಬುದನ್ನು ನಾವಿಲ್ಲಿ ಗಮನಿಸಬೇಕು). ಹದಿನೈದು ವರ್ಷಗಳ ಹಿಂದಾಗಿದ್ದರೆ, ಯಂತ್ರಗಳು ಮನುಷ್ಯನನ್ನು ಹತೋಟಿಗೆ ತೆಗೆದುಕೊಳ್ಳುವುದರ ನಮ್ಮ ಊಹೆ ಬೇರೆಯದೇ ಇರುತ್ತಿತ್ತೇನೋ. ಇಂಗ್ಲಿಷ್ ಸಿನಿಮಾಗಳಲ್ಲಿ ನೋಡಿರುವಂತೆ, ವಿಜ್ಞಾನಿಯೊಬ್ಬ ಸೃಷ್ಟಿಸಿದ ಮಹಾ ಶಕ್ತಿಶಾಲಿ ಬೃಹತ್ ಯಂತ್ರಮಾನವನೊಬ್ಬ ಆ ವಿಜ್ಞಾನಿಯ ಅಂಕೆಯಿಂದ ತಪ್ಪಿಸಿಕೊಂಡು ಜನರನ್ನೆಲ್ಲ ಸಾಯಿಸುವ ಕಲ್ಪನೆಯ ಅತ್ತಿತ್ತಲೇ ನಮ್ಮ ಆಲೋಚನೆಗಳು ಸುತ್ತುತ್ತಿದ್ದವೇನೋ. ಆದರೆ, ಇಂದು ಹರಾರಿಯ ಮಾತಿನ ಸಾಧ್ಯತೆಯ ಹಲವು ಆಯಾಮಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತಿವೆ. ಯಂತ್ರದ ಅವಲಂಬನೆಯಿಲ್ಲದೇ ಕ್ಷಣಮಾತ್ರವೂ ಬದುಕಲಾಗದ ಸ್ಥಿತಿ ಯಾವುದೇ ಶರಣಾಗತಿಗಿಂತ ಕಡಿಮೆಯೇನಲ್ಲ. ಈಗಾಗಲೇ ಆ ಹಂತವನ್ನು ನಾವು ತಲುಪಿಯಾಗಿದೆ. ಅದನ್ನು ಮುಂದಿನ ಪೀಳಿಗೆಗೂ ದಾಟಿಸಲೋಸುಗ, ಮೊಬೈಲಿನಲ್ಲಿ ಸಂಗೀತ ಕೇಳದೇ ಹಾಲು ಗಂಟಲಲ್ಲಿ